ಉಳ್ಳಾಲದಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಜಮೀನು ಸ್ವಾಧೀನತೆ ಕುರಿತು

92-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ಮಂಡಲ ಪಂಚಾಯಿತಿಗೆ ಒಳಪಟ್ಟ ಸ:ನಂ: 139-6ಬಿ1 138-6ಬಿ1, 139-7 ಎ ಜಮೀನನ್ನು ಆಟದ ಮೈದಾನ ಇನ್ನಿತರ ನಾಗರೀಕರ ಸೌಲಭ್ಯಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಸರ್ಕಾರಕ್ಕೆ ಕೋರಿಕೆ ಬಂದಿದೆಯೇ?

ಆ) ಆಟದ ಮೈದಾನ ಮತ್ತು ಇನ್ನಿತರ ನಾಗರೀಕ ಸೌಲಭ್ಯಕ್ಕೆ ಇದು ಅಗತ್ಯವಾಗಿರುವುದರಿಂದ ಈ ಬಗ್ಗೆ ಸರ್ಕಾರ ಶೀಘ್ರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳು) :

ಅ) ಆಡಳಿತಾಧಿಕಾರಿ ಉಳ್ಳಾಲ ಮಂಡಲ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ ಇವರು, ಸದರಿ ಮಂಡಲ ಪಂಚಾಯಿತಿ ಅಭಿವೃದ್ಧಿ ಕಾರ್ಯಗಳಿಗಾಗಿ ಉಳ್ಳಾಲ ಗ್ರಾಮದ ಸ:ನಂ: 139-6ಬಿಯ 0-87 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನಕ್ಕೆ ಕೋರಿ ದಿನಾಂಕ 26-2-93ರಂದು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಭೂಸ್ವಾಧೀನತೆಯ ಉದ್ದೇಶವನ್ನು ಸ್ಪಷ್ಟವಾಗಿ ಕಾಣಿಸಿ ನಿಗದಿತ ನಮೂನೆಯಲ್ಲಿ ಸಲ್ಲಿಸಲು ಮಂಡಲ ಪಂಚಾಯಿತಿಯವರಿಗೆ ಜಿಲ್ಲಾಧಿಕಾರಿಗಳು ದಿನಾಂಕ 16-3-93ರಂದು ಬರೆದಿದ್ದು ನಂತರ ದಿನಾಂಕ 4-8-93ರಂದು ನೆನಪೋಲೆಯನ್ನು ಸಹ ಕಳುಹಿಸಿದ್ದಾರೆ. ಆದರೆ ಮಂಡಲ ಪಂಚಾಯಿತಿಯವರು ಸೂಕ್ತ ಪ್ರಸ್ತಾವನೆ ಇನ್ನೂ ಸಲ್ಲಿಸಿರುವುದಿಲ್ಲ.

ಆ) ಭೂಸ್ವಾಧೀನತೆ ಕೋರಿರುವ ಮಂಡಲ ಪಂಚಾಯಿತಿಯವರು ಭೂಸ್ವಾಧೀನ ಕಾಯ್ದೆಯನುಸಾರ ಪ್ರಸ್ತಾವನೆ ತಯಾರಿಸಿ ನಿಗದಿತ ನಮೂನೆಗಳಲ್ಲಿ ಬೇಡಿಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ಪರಿಶೀಲಿಸಿ ಭೂಸ್ವಾಧೀನ ಕಾಯ್ದೆಗೆ ಅನುಗುಣವಾಗಿ ಕ್ರಮ ಜರುಗಿಸಲಾಗುವುದು.

ಆಶ್ರಯ ಯೋಜನೆಯಲ್ಲಿ ಹಾಸನ ಜಿಲ್ಲೆಯಲ್ಲಿ ಕಟ್ಟಿರತಕ್ಕ ಮನೆಗಳು

148 - ಶ್ರೀ ಜಿ. ಪುಟ್ಟಸ್ವಾಮಿಗೌಡ, (ಹೊಳೆನರಸೀಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಹಾಸನ ಜಿಲ್ಲೆಯಲ್ಲಿ ಎಷ್ಟು ಮನೆಗಳನ್ನು ಆಶ್ರಯ ಯೋಜನೆಯಲ್ಲಿ ನಿರ್ಮಿಸಲಾಗಿದೆ, (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) 1993-94ರಲ್ಲಿ ಹೊಸದಾಗಿ ತೆಗೆದುಕೊಂಡ ಮನೆಗಳ ಪೈಕಿ ಇನ್ನೂ ಎಷ್ಟು ಮನೆಗಳು ವಿವಿಧ ಹಂತದಲ್ಲಿದೆ?

ಇ) 1993ರ ಡಿಸೆಂಬರ್ ಅಂತ್ಯದವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಈ) 1994ರ ಮಾರ್ಚ್ ಅಂತ್ಯಕ್ಕೆ ಎಷ್ಟು ಮನೆಗಳನ್ನು ಪೂರ್ಣಗೊಳಿಸಲಾಗುವುದು?

ಉ) ಅದಕ್ಕಾಗಿ ಬೇಕಾಗಿರುವ ಹಣವೆಷ್ಟು?

ಶ್ರೀ ಗೋಪಿನಾಥ್ ಆರ್ ಸಾಂದ್ರ (ವಸತಿ ಸಚಿವರು) :

ಅ) ಜನವರಿ 1994ರ ಅಂತ್ಯದವರೆಗೆ ಒಟ್ಟು 815 ಮನೆಗಳು ಪೂರ್ಣಗೊಂಡಿವೆ. (ಜಿಲ್ಲಾಧಿಕಾರಿಗಳ ವತಿಯಿಂದ 748, ಕೆ.ಹೆಚ್.ಬಿ.ಯಿಂದ 67) ವಿವರ ಅನುಬಂಧದಲ್ಲಿದೆ.

ಆ) ಹಿಂದಿನ ಸಾಲಿನಲ್ಲಿ ಕೈಗೆತ್ತಿಕೊಂಡ ಮನೆಗಳ ಕಾಮಗಾರಿ ಪ್ರಾರಂಭವಾಗದ್ದರಿಂದ, ಚಾಲ್ತಿ ಸಾಲಿನಲ್ಲಿ ಅವುಗಳ ನಿರ್ಮಾಣ ಕೈಗೆತ್ತಿಕೊಂಡಿದೆ. 1501 ಮನೆಗಳು ಪ್ರಗತಿಯ ವಿವಿಧ ಹಂತದಲ್ಲಿದೆ.